ಆ) ಈ ಹಣವನ್ನು ಇದುವರೆವಿಗೂ ಬಿಡುಗಡೆ ಮಾಡದಿರಲು ಕಾರಣವೇನು ?

ಶ್ರೀ ರಾಮಚಂದ್ರಗೌಡ (ಯೋಜನಾ ಸಚಿವರು) –

ಅ) ಶಾಸಕರ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ 2006–07ನೇ ಸಾಲಿನ ಆಯವ್ಯಯದಲ್ಲಿ ರೂ.300 ಕೋಟಿ ಅನುದಾನವನ್ನು ಒದಗಿಸಲಾಗಿದ್ದು, ಎಲ್ಲಾ ಹಣವನ್ನು ಈಗಾಗಲೇ ಬಿಡುಗಡೆ ಮಾಡಲಾಗಿದೆ.

ಆ) ಉದ್ಭವಿಸುವುದಿಲ್ಲ.

217 (620) : ಶ್ರೀ ಕೃಷ್ಣ ಪಾಲೇಮಾರ್ ಜೆ. (ಸುರತ್ಕಲ್) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುವರ್ಣ ಕಾಯಕ ಯೋಜನೆಯಡಿಯಲ್ಲಿ ಎಷ್ಟು ಜನ ಯುವಕ - ಯುವತಿಯರಿಗೆ ಉದ್ಯೋಗ ತರಬೇತಿಯನ್ನು ನೀಡಲು ಸರ್ಕಾರ ತೀರ್ಮಾನಿಸಿದೆ ;

ಆ) ರಾಜ್ಯದ ಐಟಿ - ಬಿಟಿ ಕಂಪನಿಗಳು ಎಷ್ಟು ಪ್ರಮಾಣದಲ್ಲಿ ಈ ಬಗ್ಗೆ ಸಹಕಾರವನ್ನು ನೀಡಲು ಮುಂದಾಗಿವೆ ;

ಇ) ಸಣ್ಣ, ದೊಡ್ಡ ಹಾಗೂ ಮಧ್ಯಮ ಕೈಗಾರಿಕೆಗಳಲ್ಲಿ ಕರ್ನಾಟಕದ ಯುವಕ -ಯುವತಿಯರಿಗೆ ಹೆಚ್ಚಿನ ಉದ್ಯೋಗಾವಕಾಶಗಳನ್ನು ಒದಗಿಸಿಕೊಡಲು ಸರ್ಕಾರ ಮೇಲ್ಕಂಡ ಸಂಸ್ಥೆಗಳಿಗೆ ವಿಧಿಸಿರುವ ಷರತ್ತುಗಳೇನು ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) –

ಅ) ಈ ಯೋಜನೆಯಲ್ಲಿ 2006–07ನೇ ಸಾಲಿಗೆ 1 ಲಕ್ಷ ಯುವಕ ಯುವತಿಯರಿಗೆ ಉದ್ಯೋಗ ತರಬೇತಿಯನ್ನು ನೀಡಲು ಸರ್ಕಾರ ಯೋಜನೆಯನ್ನು ರೂಪಿಸಿದೆ.

ಆ) ಕೆಲವೊಂದು ಐಟಿ ಕಂಪನಿಗಳು ಪೂರ್ಣ ಪ್ರಮಾಣದಲ್ಲಿ ಸಹಕಾರ ನೀಡಲು ಮುಂದಾಗಿರುತ್ತವೆ. [Infosys, I-Gate, Satyam Computers ಇತ್ಯಾದಿ)

ಇ) ತರಬೇತಿ ನೀಡುವ ಕೈಗಾರಿಕಾ ಸಂಸ್ಥೆಗಳು ಸೂಕ್ತ ರೀತಿಯಲ್ಲಿ ವೃತ್ತಿ ನಿರತ ತರಬೇತಿಯನ್ನು ನೀಡುವುದರೊಂದಿಗೆ ರೂ. 750/– ಶಿಷ್ಯ ವೇತನವನ್ನು ನೀಡಬೇಕಾಗಿರುತ್ತದೆ ಮತ್ತು ತರಬೇತಿ ಮುಗಿದ ನಂತರ ಅರ್ಹ ಅಭ್ಯರ್ಥಿಗಳಿಗೆ ಉದ್ಯೋಗ ನೀಡಬೇಕು ಎಂಬ ಷರತ್ತುಗಳಿವೆ.

220 (614) : ಶ್ರೀ ಕೃಷ್ಣಮೂರ್ತಿ ಕೆ.ಎಂ. (ಕಡೂರು) – ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರಿ ಕೈಗಾರಿಕಾ ಉಪಕರಣ ಕೇಂದ್ರ (G.T.T.C.) ಕಡೂರಿಗೆ ಯಾವ ವರ್ಷದಲ್ಲಿ ಮಂಜೂರಾಯಿತು ;

ಆ) ಕಡೂರಿನಲ್ಲಿ G.T.T.C. ತರಬೇತಿಯ ಕೇಂದ್ರಗಳನ್ನು ಪ್ರಾರಂಭಿಸದಿರಲು ಕಾರಣಗಳೇನು ;

ಇ) G.T.T.C. ಕೇಂದ್ರದ ಅಭಿವೃದ್ಧಿಗಾಗಿ 2006-07ನೇ ಸಾಲಿನ ಬಜೆಟ್‌ನಲ್ಲಿ ಒದಗಿಸಿಕೊಡಲಾದ ಆರ್ಥಿಕ ನೆರವೆಷ್ಟು ;

ಈ) 2007-08ನೇ ಸಾಲಿನ ಬಜೆಟ್‌ನಲ್ಲಿ ಈ ಕೇಂದ್ರದ ಅಭಿವೃದ್ಧಿಗೆ ಎಷ್ಟು ಆರ್ಥಿಕ ನೆರವನ್ನು ಒದಗಿಸಲಾಗುವುದು ?

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು) –

ಅ) ಸರ್ಕಾರಿ ಕೈಗಾರಿಕಾ ಉಪಕರಣ ಕೇಂದ್ರ (G.T.T.C.) ಕಡೂರಿಗೆ 2005–06ನೇ ವರ್ಷದಲ್ಲಿ ಮಂಜೂರಾಯಿತು. ಸರ್ಕಾರಿ ಆದೇಶ ಸಂಖ್ಯೆ: ಸಿಐ 61 ಎಸ್‌ಜಿಟಿ 2005, ದಿನಾಂಕ: 26.7.2005.

ಆ) ಕೇಂದ್ರವನ್ನು ಸ್ಥಾಪಿಸಲು ಸೂಕ್ತ ಸ್ಥಳಾವಕಾಶ ಇಲ್ಲದಿದ್ದ ಕಾರಣ ಹಾಗೂ ಆಯವ್ಯಯದಲ್ಲಿ ಅನುದಾನ ಕೊರತೆಯಿಂದ 2006–07ನೇ ಶೈಕ್ಷಣಿಕ ವರ್ಷದಲ್ಲಿ ಈ ಕೇಂದ್ರವನ್ನು ಪ್ರಾರಂಭ ಮಾಡಲು ಆಗಲಿಲ್ಲ.

ಇ) ಜಿ.ಟಿ.ಟಿ.ಸಿ. ಕಡೂರು ಕೇಂದ್ರದ ಅಭಿವೃದ್ಧಿಗಾಗಿ 2006–07ನೇ ಸಾಲಿನ ಬಜೆಟ್‌ನಲ್ಲಿ ರೂ. 85.00 ಲಕ್ಷಗಳನ್ನು ಒದಗಿಸಲಾಗಿದೆ.

ಈ) 2007–08ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಗೆ ಅನುದಾನ ಲಭ್ಯತೆಯ ಆಧಾರದ ಮೇಲೆ ಒದಗಿಸುವ ಆರ್ಥಿಕ ನೆರವಿನ ಪ್ರಮಾಣ ನಿಗದಿಪಡಿಸಲಾಗುವುದು.